**All India Radio: Bangalore**
**National Bulletin In Kannada**
**07.04.2026 07.35 a.m.**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

**07.04.2026 07.35 a.m.**

**<><><><>**

ಮುಖ್ಯಾಂಶಗಳು

1. ಭಾರತದ ಅಣುಶಕ್ತಿ ಕಾರ್ಯಕ್ರಮದಲ್ಲಿ ಐತಿಹಾಸಿಕ ಸಾಧನೆ: ನಿರ್ಣಾಯಕ ಹಂತ ತಲುಪಿದ ಕಲ್ಪಾಕ್ಕಂನ ದೇಶೀಯ ’ಫಾಸ್ಟ್ ಬ್ರೀಡರ್ ರಿಯಾಕ್ಟರ್’
2. ಅಸ್ಸಾಂ, ಕೇರಳ, ಪುದುಚೇರಿ ವಿಧಾನಸಭಾ ಚುನಾವಣೆ ; ಇಂದು ಬಹಿರಂಗ ಪ್ರಚಾರಕ್ಕೆ ತೆರೆ, ರಾಜಕೀಯ ಪಕ್ಷಗಳಿಂದ ಅಂತಿಮ ಹಂತದ ಪ್ರಚಾರ
3. ಮುಖ್ಯ ಚುನಾವಣಾಯುಕ್ತರ ಪದಚ್ಯುತಿ ನೋಟೀಸ್ ತಿರಸ್ಕರಿಸಿದ ರಾಜ್ಯಸಭಾಪತಿ ಹಾಗೂ ಲೋಕಸಭಾಧ್ಯಕ್ಷರು
4. ಐಎಸ್‌ಎಸ್‌ಎಫ್ ರೈಫಲ್ ಮತ್ತು ಪಿಸ್ತೂಲ್ ವಿಶ್ವಕಪ್ ಸ್ಪೇನ್‌ನ ಗ್ರನಾಡಾದಲ್ಲಿಂದು ಆರಂಭ

<><><><>

ಭಾರತದ ಪರಮಾಣು ಇಂಧನ ಇತಿಹಾಸದಲ್ಲಿ ಇಂದು ಅತ್ಯಂತ ಮಹತ್ವದ ಮೈಲಿಗಲ್ಲು ಸ್ಥಾಪನೆಯಾಗಿದೆ. ತಮಿಳುನಾಡಿನ ಕಲ್ಪಾಕ್ಕಂನಲ್ಲಿ ಸಂಪೂರ್ಣವಾಗಿ ದೇಶೀಯ ತಂತ್ರಜ್ಞಾನದಿಂದ ವಿನ್ಯಾಸಗೊಳಿಸಿ ನಿರ್ಮಿಸಲಾದ ೫೦೦ ಮೆಗಾವ್ಯಾಟ್ ಸಾಮರ್ಥ್ಯದ ’ಪ್ರೊಟೊಟೈಪ್ ಫಾಸ್ಟ್ ಬ್ರೀಡರ್ ರಿಯಾಕ್ಟರ್’ ಯಶಸ್ವಿಯಾಗಿ ನಿರ್ಣಾಯಕ ಹಂತ ತಲುಪಿದೆ. ಪರಮಾಣು ರಿಯಾಕ್ಟರ್ ಒಂದು ತನ್ನದೇ ಆದ ಶಕ್ತಿಯಿಂದ ಕಾರ್ಯನಿರ್ವಹಿಸಲು ಆರಂಭಿಸುವ ಹಂತವನ್ನು ನಿರ್ಣಾಯಕ ಸ್ಥಿತಿ ತಲುಪುವುದು ಎನ್ನಲಾಗುತ್ತದೆ. ಭಾರತೀಯ ನಭಿಕೀಯ ವಿದ್ಯುತ್ ನಿಗಮ ನಿಯಮಿತ ಈ ಯೋಜನೆಯ ಉಸ್ತುವಾರಿ ವಹಿಸಿದ್ದು, ಇದು ಭಾರತದ ದೀರ್ಘಕಾಲೀನ ಪರಮಾಣು ಕಾರ್ಯತಂತ್ರದ ಅತ್ಯಗತ್ಯ ಭಾಗವಾಗಿದೆ. ಈ ರಿಯಾಕ್ಟರ್ ಪೂರ್ಣ ಪ್ರಮಾಣದಲ್ಲಿ ಕಾರ್ಯಾಚರಣೆ ಆರಂಭಿಸಿದರೆ, ರಷ್ಯಾ ನಂತರ ವಾಣಿಜ್ಯ ಬಳಕೆಯ ಫಾಸ್ಟ್ ಬ್ರೀಡರ್ ರಿಯಾಕ್ಟರ್ ಹೊಂದಿರುವ ವಿಶ್ವದ ಎರಡನೇ ದೇಶ ಎಂಬ ಹೆಗ್ಗಳಿಕೆಗೆ ಭಾರತ ಪಾತ್ರವಾಗಲಿದೆ. ಈ ಸಾಧನೆಯನ್ನು ಶ್ಲಾಘಿಸಿರುವ ಪ್ರಧಾನಿ ನರೇಂದ್ರ ಮೋದಿ, "ಭಾರತವು ತನ್ನ ನಾಗರಿಕ ಪರಮಾಣು ಪಯಣದಲ್ಲಿ ನಿರ್ಣಾಯಕ ಹೆಜ್ಜೆಯನ್ನಿಟ್ಟಿದೆ. ಇದು ದೇಶದ ಮೂರು ಹಂತದ ಪರಮಾಣು ಕಾರ್ಯಕ್ರಮದ

ಎರಡನೇ ಹಂತವನ್ನು ಬಲಪಡಿಸಲಿದೆ" ಎಂದು ಸಾಮಾಜಿಕ ಜಾಲತಾಣದಲ್ಲಿ ಹರ್ಷ ವ್ಯಕ್ತಪಡಿಸಿದ್ದಾರೆ.

<><><>

ಭಾರತೀಯ ಸೇನೆಯು 'ಮಾನವರಹಿತ ವೈಮಾನಿಕ ವ್ಯವಸ್ಥೆ' ಮತ್ತು 'ಲೋಯಿಟರಿಂಗ್ ಮ್ಯೂನಿಷನ್ಸ್'ಗಾಗಿ ಸಮಗ್ರ ತಂತ್ರಜ್ಞಾನ ಮಾರ್ಗಸೂಚಿಯನ್ನು ನವದೆಹಲಿಯಲ್ಲಿ ಬಿಡುಗಡೆ ಮಾಡಿದೆ. ಈ ಉಪಕ್ರಮವು ಸೇನೆಯ ಭವಿಷ್ಯದ ಅಗತ್ಯತೆಗಳ ಬಗ್ಗೆ ಸುದೀರ್ಘ ದೃಷ್ಟಿಕೋನವನ್ನು ನೀಡಲಿದ್ದು, ರಕ್ಷಣಾ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೈಗಾರಿಕೆಗಳು, ಶಿಕ್ಷಣ ತಜ್ಞರು ಮತ್ತು ಸಂಶೋಧನಾ ಸಂಸ್ಥೆಗಳಿಗೆ ಸ್ಪಷ್ಟ ಮಾರ್ಗದರ್ಶನ ನೀಡಲಿದೆ. ಈ ಮಾರ್ಗಸೂಚಿಯು ದೇಶೀಯವಾಗಿ ಅತ್ಯಾಧುನಿಕ ವೈಮಾನಿಕ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಲು ಸಹಕಾರಿಯಾಗಲಿದೆ ಎಂದು ಸೇನೆ ತಿಳಿಸಿದೆ.

<><><>

ಅಸ್ಸಾಂ, ಕೇರಳ ಮತ್ತು ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಯ ವಿಧಾನಸಭಾ ಚುನಾವಣೆಯ ಬಹಿರಂಗ ಪ್ರಚಾರವು ಇಂದು ಸಂಜೆ ಕೊನೆಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ವಿವಿಧ ರಾಜಕೀಯ ಪಕ್ಷಗಳ ನಾಯಕರು ಮತದಾರರನ್ನು ಸೆಳೆಯಲು ಕೊನೆಯ ಕ್ಷಣದ ಬಿರುಸಿನ ಪ್ರಚಾರದಲ್ಲಿ ತೊಡಗಿದ್ದಾರೆ. ಅಸ್ಸಾಂನ ೧೨೬, ಕೇರಳದ ೧೪೦ ಮತ್ತು ಪುದುಚೇರಿಯ ೩೦ ಸ್ಥಾನಗಳಿಗೆ ಇದೇ ೯ ರಂದು ಒಂದೇ ಹಂತದಲ್ಲಿ ಮತದಾನ ನಡೆಯಲಿದೆ. ಪ್ರಧಾನಿ ನರೇಂದ್ರ ಮೋದಿ ಅವರು ನಿನ್ನೆ ಅಸ್ಸಾಂನ ಬಾರ್ಪೇಟಾ, ಹೊಜಾಯ್ ಮತ್ತು ದಿಬ್ರುಗಢಗಳಲ್ಲಿ ಬೃಹತ್ ರ್‍ಯಾಲಿಗಳನ್ನು ನಡೆಸಿ, ಅಸ್ಸಾಂನಲ್ಲಿ ಬಿಜೆಪಿ ಸತತ ಮೂರನೇ ಬಾರಿಗೆ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಮತ್ತೊಂದೆಡೆ, ಕಾಂಗ್ರೆಸ್ ನಾಯಕಿ ಕುಮಾರಿ ಸೆಲ್ಜಾ ಗುವಾಹಟಿಯಲ್ಲಿ ಸುದ್ದಿಗೋಷ್ಠಿ ನಡೆಸಿ, ತಮ್ಮ ಪಕ್ಷವು ಎಲ್ಲರಿಗೂ ಸಮಾನ ಹಕ್ಕು ಮತ್ತು ನ್ಯಾಯ ಒದಗಿಸಲು ಬದ್ಧವಾಗಿದೆ ಎಂದು ತಿಳಿಸಿದ್ದಾರೆ. ಕೇರಳ ಮತ್ತು ಪುದುಚೇರಿಯಲ್ಲಿಯೂ ರೋಡ್ ಶೋ ಮತ್ತು ಬಹಿರಂಗ ಸಭೆಗಳ ಮೂಲಕ ಬಿರುಸಿನ ಪ್ರಚಾರ ನಡೆದಿದೆ. ತಮಿಳುನಾಡಿನ ಎಲ್ಲಾ ೨೩೪ ಸ್ಥಾನಗಳಿಗೆ ಮತ್ತು ಪಶ್ಚಿಮ ಬಂಗಾಳದ ಮೊದಲ ಹಂತದ ೧೫೨ ಕ್ಷೇತ್ರಗಳಿಗೆ ಈ ತಿಂಗಳ ೨೩ ರಂದು ಮತದಾನ ನಡೆಯಲಿದೆ. ನಾಮಪತ್ರ ಹಿಂತೆಗೆದುಕೊಳ್ಳಲು ಇದೇ ೯ ಕೊನೆಯ ದಿನವಾಗಿದ್ದು, ಇಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಎಲ್ಲಾ ರಾಜ್ಯಗಳ ಚುನಾವಣಾ ಫಲಿತಾಂಶವು ಮೇ ೪ ರಂದು ಪ್ರಕಟವಾಗಲಿದೆ.

<><><>

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಪದಚ್ಯುತಗೊಳಿಸುವಂತೆ ಕೋರಿ ವಿರೋಧ ಪಕ್ಷದ ಸದಸ್ಯರು ಮಂಡಿಸಿದ್ದ ನೋಟಿಸ್ ಅನ್ನು ರಾಜ್ಯಸಭಾ ಸಭಾಪತಿ ಸಿ.ಪಿ. ರಾಧಾಕೃಷ್ಣನ್ ಮತ್ತು ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರು ತಿರಸ್ಕರಿಸಿದ್ದಾರೆ. ವಿರೋಧ ಪಕ್ಷಗಳು ಚುನಾವಣಾ ಆಯುಕ್ತರ ವಿರುದ್ಧ ಪಕ್ಷಪಾತದ ಧೋರಣೆಯ ಆರೋಪ ಹೊರಿಸಿ ಮೊದಲ ಬಾರಿಗೆ ಎರಡೂ ಸದನಗಳಲ್ಲಿ ಈ ನೋಟಿಸ್ ನೀಡಿದ್ದವು. ಆದರೆ, ಸಭಾಪತಿಗಳು ಈ ನೋಟಿಸ್‌ನ ಎಲ್ಲಾ ಆಯಾಮಗಳನ್ನು ಕೂಲಂಕಷವಾಗಿ ಮತ್ತು ವಸ್ತುನಿಷ್ಠವಾಗಿ ಪರಿಶೀಲಿಸಿದ ನಂತರ, ಅದನ್ನು ಅಂಗೀಕರಿಸಲು ನಿರಾಕರಿಸಿದ್ದಾರೆ ಎಂದು ಸಂಸತ್ತಿನ ಉಭಯ ಸಚಿವಾಲಯಗಳು ಪ್ರತ್ಯೇಕ ಪ್ರಕಟಣೆಯಲ್ಲಿ ತಿಳಿಸಿವೆ.

<><><><>

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಆಂಧ್ರಪ್ರದೇಶ ಪುನರ್ವಿಂಗಡಣೆ ಕಾಯ್ದೆ, ೨೦೨೬ಕ್ಕೆ ನಿನ್ನೆ ತಮ್ಮ ಒಪ್ಪಿಗೆ ನೀಡಿದ್ದಾರೆ ಎಂದು ಕಾನೂನು ಸಚಿವಾಲಯದ ಅಧಿಸೂಚನೆ ತಿಳಿಸಿದೆ. ಹಾಗೂ ಅಮರಾವತಿಯನ್ನು ಆಂಧ್ರಪ್ರದೇಶದ ಏಕೈಕ ಮತ್ತು ಶಾಶ್ವತ ರಾಜಧಾನಿಯಾಗಿ ಅಧಿಕೃತವಾಗಿ ಘೋಷಿಸಿದ್ದಾರೆ. ಈ ಹೊಸ ಕಾನೂನು, ಅಮರಾವತಿಗೆ ಆಂಧ್ರಪ್ರದೇಶದ ರಾಜಧಾನಿಯಾಗಿ ಶಾಸನಬದ್ಧ ಸ್ಥಾನಮಾನವನ್ನು ನೀಡುತ್ತದೆ. ಕಳೆದ ವಾರ ಬಜೆಟ್ ಅಧಿವೇಶನದಲ್ಲಿ ಲೋಕಸಭೆ ಮತ್ತು ರಾಜ್ಯಸಭೆಗಳು ಆಂಧ್ರಪ್ರದೇಶ ಪುನರ್ವಿಂಗಡಣೆ ಮಸೂದೆ, ೨೦೨೬ ಅನ್ನು ಅಂಗೀಕರಿಸಿದ್ದವು.

<><><><>

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್ ವಿರುದ್ಧ ಅತ್ಯಂತ ಕಠಿಣ ನಿಲುವು ಕೈಗೊಂಡಿದ್ದು, ಒಂದು ವೇಳೆ ಇರಾನ್ ಒಪ್ಪಂದಕ್ಕೆ ಬಾರದಿದ್ದರೆ ಮತ್ತು ಜಾಗತಿಕ ಇಂಧನ ಮಾರ್ಗವಾದ ಹೋರ್ಮುಜ್ ಜಲಸಂಧಿಯನ್ನು ತೆರೆಯದಿದ್ದರೆ ಆ ದೇಶವನ್ನು ಒಂದೇ ರಾತ್ರಿಯಲ್ಲಿ ಧ್ವಂಸಗೊಳಿಸುವುದಾಗಿ ಎಚ್ಚರಿಸಿದ್ದಾರೆ. ಈ ಬಿಕ್ಕಟ್ಟನ್ನು ಬಗೆಹರಿಸಲು ಅಧ್ಯಕ್ಷ ಟ್ರಂಪ್, ಭಾರತೀಯ ಕಾಲಮಾನ ನಾಳೆ ಬೆಳಗ್ಗೆ ೫.೩೦ರವರೆಗೆ ಅಂತಿಮ ಗಡುವು ನೀಡಿದ್ದಾರೆ. ಶ್ವೇತಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅಧ್ಯಕ್ಷ ಟ್ರಂಪ್, ಇರಾನ್‌ನ ಇಂಧನ ಮತ್ತು ಸಾರಿಗೆ ಮೂಲಸೌಕರ್ಯಗಳನ್ನು ಅಮೆರಿಕ ಗುರಿಯಾಗಿಸಿಕೊಳ್ಳಲಿದೆ. ಕೆಲವು ಇರಾನ್ ನಾಯಕರು ಸಮಾಲೋಚನೆಯಲ್ಲಿ ಸಾಕರಾತ್ಮಕವಾಗಿ ಸ್ಪಂದಿಸುತ್ತಿದ್ದರೂ, ಪರಿಸ್ಥಿತಿ ಇನ್ನೂ ಅನಿಶ್ಚಿತವಾಗಿದೆ ಎಂದು ತಿಳಿಸಿದ್ದಾರೆ. ಮತ್ತೊಂದೆಡೆ ಅಮೆರಿಕದ ಕದನ ವಿರಾಮ ಪಸ್ತಾವನೆಯನ್ನು ಇರಾನ್

ತಿರಸ್ಕರಿಸಿದೆ. ಯುದ್ಧವನ್ನು ನಿಲ್ಲಿಸುವುದರ ಜೊತೆಗೆ ಹಾನಿಗೊಳಗಾದ ಮೂಲಸೌಕರ್ಯಗಳ ಪುನರ್ ನಿರ್ಮಾಣಕ್ಕೆ ನೆರವು ಮತ್ತು ತನ್ನ ಮೇಲಿನ ಎಲ್ಲಾ ನಿರ್ಬಂಧಗಳನ್ನು ತೆಗೆದುಹಾಕುವಂತೆ ಇರಾನ್ ಆಗ್ರಹಿಸಿದೆ. ಅಮೆರಿಕದ ಮಿಲಿಟರಿ ಪ್ರಯತ್ನಗಳಿಗೆ ಪಿಸಿಫಿಕ್ ಮತ್ತು ನ್ಯಾಟೊ ಮಿತ್ರರಾಷ್ಟ್ರಗಳು ಬೆಂಬಲ ನೀಡದಿರುವ ಕುರಿತು ಇದೇ ವೇಳೆ ಅಧ್ಯಕ್ಷ ಟ್ರಂಪ್ ಅಸಮಾಧಾನ ವ್ಯಕ್ತಪಡಿಸಿದರು.

<><><><>

ಸ್ಪೇನ್‌ನ ಗ್ರನಾಡದಲ್ಲಿ ಇಂದು ಆರಂಭವಾಗಲಿರುವ ಐಎಸ್‌ಎಸ್‌ಎಫ್ ರೈಫಲ್ಸ್ ಮತ್ತು ಪಿಸ್ತೂಲ್ ವಿಶ್ವಕಪ್‌ನಲ್ಲಿ ಭಾರತದ ಶೂಟರ್‌ಗಳು ತಮ್ಮ ಅಭಿಯಾನ ಆರಂಭಿಸಲಿದ್ದಾರೆ. ಇಂದು ನಡೆಯಲಿರುವ ೧೦ ಮೀಟರ್ ಏರ್ ರೈಫಲ್ ಮತ್ತು ೧೦ ಮೀಟರ್ ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದ ಸ್ಪರ್ಧೆಗಳಲ್ಲಿ ಭಾರತೀಯ ಕ್ರೀಡಾಪಟುಗಳು ಪದಕಕ್ಕಾಗಿ ಸೆಣಸಲಿದ್ದಾರೆ. ಏರ್ ಪಿಸ್ತೂಲ್ ವಿಭಾಗದಲ್ಲಿ ಭಾರತದ ಪರವಾಗಿ ಪಲಕ್ ಗುಲಿಯ ಮತ್ತು ಮುಖೇಶ್ ನೆಲವಲ್ಲಿ ಒಂದು ತಂಡವಾಗಿ ಹಾಗೂ ಸೈನ್ಯಂ ಮತ್ತು ಉಜ್ವಲ್ ಮಲ್ಲಿಕ್ ಮತ್ತೊಂದು ತಂಡವಾಗಿ ಕಣಕ್ಕಿಳಿಯುತ್ತಿದ್ದಾರೆ. ಏರ್ ರೈಫಲ್ ವಿಭಾಗದಲ್ಲಿ ಸೋನಮ್ ಮಾಸ್ಕರ್ ಮತ್ತು ಗಜಾನನಂ ಖಂಡಾಗಲೆ ಜೋಡಿ ಹಾಗೂ ಶೃತಿ ಮತ್ತು ಅರ್ಷದೀಪ್ ಸಿಂಗ್ ಜೋಡಿ ಭಾರತದ ಪರವಾಗಿ ಕಣಕ್ಕಿಳಿಯುತ್ತಿದೆ. ಈ ಬಾರಿ ವಿಶ್ವಕಪ್‌ಗಾಗಿ ಭಾರತ ೪ರಿಂದ ೬ನೇ ಶ್ರೇಯಾಂಕದಲ್ಲಿರುವ ಶೂಟರ್‌ಗಳನ್ನು ಆಯ್ಕೆ ಮಾಡಿದೆ. ಈ ಮೂಲಕ ಯುವ ಕ್ರೀಡಾಪಟುಗಳಿಗೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಲು ಮತ್ತು ಅನುಭವ ಪಡೆಯಲು ಉತ್ತಮ ವೇದಿಕೆ ಕಲ್ಪಿಸಿಕೊಡಲಾಗಿದೆ. ಈ ವರ್ಷದ ಅಂತ್ಯದಲ್ಲಿ ನಡೆಯಲಿರುವ ವಿಶ್ವ ಚಾಂಪಿಯನ್‌ಶಿಪ್ ಮೂಲಕ ೨೦೨೮ರ ಒಲಿಂಪಿಕ್‌ಗೆ ಅರ್ಹತೆ ಗಳಿಸುವ ಅವಕಾಶವಿರುವುದರಿಂದ ಈ ಕ್ರೀಡಾಕೂಟ ಭಾರತೀಯ ಶೂಟರ್‌ಗಳ ಸಿದ್ಧತೆಗಳ ದೃಷ್ಟಿಯಿಂದ ನಿರ್ಣಾಯಕವಾಗಿದೆ.

<><><><>

ಮಂಗೋಲಿಯಾದಲ್ಲಿ ನಡೆಯುತ್ತಿರುವ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಪ್ರೀತಿ ಪವಾರ್, ಮಹಿಳಾ ೫೪ ಕೆ.ಜಿ. ವಿಭಾಗದಲ್ಲಿ ಪ್ಯಾರಿಸ್ ಒಲಿಂಪಿಕ್ ಕಂಚು ಪದಕ ವಿಜೇತೆ ಕೊರಿಯಾದ ಏ ಜೆ ಇಮ್ ಅವರನ್ನು ಮಣಿಸಿ ಫೈನಲ್ಸ್ ಪ್ರವೇಶಿಸಿದ್ದಾರೆ. ನಿನ್ನೆ ನಡೆದ ಪಂದ್ಯದಲ್ಲಿ ಪ್ರೀತಿ, ಏ ಜೆ ಎಮ್ ವಿರುದ್ಧ ಅವರನ್ನು ಎಲ್ಲಾ ಮೂರು ಸುತ್ತುಗಳಲ್ಲಿ ಮೇಲುಗೈ ಸಾಧಿಸಿ ೫-೦ ಅಂತರದ ಜಯ ದಾಖಲಿಸಿದರು. ಪ್ರೀತಿ ಅವರು ಚಿನ್ನದ ಪದಕಕ್ಕಾಗಿ ನಡೆಲಿರುವ ಸೆಣಸಾಟದಲ್ಲಿ

ಚೀನಾ ತೈಪೈನ ಹೂವಾಂಗ್ ಸಿಯಾವೊ ವೆನ್ ಅವರನ್ನು ಎದುರಿಸಲಿದ್ದಾರೆ. ಮಹಿಳಾ ೬೦ ಕೆ.ಜಿ. ಸ್ಪರ್ಧೆಯಲ್ಲಿ ಪ್ರಿಯಾ, ಮಂಗೋಲಿಯಾದ ನಮೂನ್ ಮೊಂಖೋರ್ ವಿರುದ್ಧ ೫-೦ ಅಂತರದಲ್ಲಿ ಜಯಗಳಿಸಿ ಫೈನಲ್‌ಗೆ ಅರ್ಹತೆ ಪಡೆದಿದ್ದಾರೆ. ಫೈನಲ್‌ನಲ್ಲಿ ಅವರು, ಉತ್ತರ ಕೋರಿಯಾದ ಉನ್ ಗ್ಯಾಂಗ್ ವಾನ್ ವಿರುದ್ಧ ಸೆಣಸಲಿದ್ದಾರೆ. ಮತ್ತೊರ್ವ ಭಾರತೀಯ ಬಾಕ್ಸರ್ ಅರುಂಧತಿ ೭೦ ಕೆ.ಜಿ. ವಿಭಾಗದ ಫೈನಲ್ಲಿ ಕಣಕ್ಕಿಳಿಯುತ್ತಿದ್ದಾರೆ.

<><><><>

ಕೊಲ್ಕತ್ತಾದ ಈಡನ್ ಗಾರ್ಡನ್ಸ್‌ನಲ್ಲಿ ಕಳೆದ ರಾತ್ರಿ ನಡೆದ ಕೊಲ್ಕತ್ತಾ ನೈಟ್ ರೈಡರ್ಸ್ ಮತ್ತು ಪಂಜಾಬ್ ಕಿಂಗ್ಸ್ ನಡುವಿನ ಐಪಿಎಲ್ ಟಿ-೨೦ ಕ್ರಿಕೆಟ್ ಪಂದ್ಯ ಮಳೆ ಹಿನ್ನೆಲೆ ರದ್ಧುಗೊಳಿಸಲಾಯಿತು. ಟಾಸ್ ಗೆದ್ದು ಮೊದಲು ಬ್ಯಾಟಿಂಗ್‌ಗೆ ಇಳಿದಿದ್ದ ಕೊಲ್ಕತ್ತಾ ತಂಡ ೩.೪ ಓವರ್‌ಗಳಲ್ಲಿ ೨ ವಿಕೆಟ್ ನಷ್ಟಕ್ಕೆ ೨೫ ರನ್ ಗಳಿಸಿದ್ದ ವೇಳೆ ಆಟಕ್ಕೆ ಮಳೆ ಅಡ್ಡಪಡಿಸಿದ ಹಿನ್ನೆಲೆಯಲ್ಲಿ ಪಂದ್ಯವನ್ನು ಸ್ಥಗಿತಗೊಳಿಸಲಾಯಿತು. ಸುಮಾರು ೩ ಗಂಟೆಗಳ ಕಾಲ ಕಾಯುವಿಕೆಯ ನಂತರವು ಮಳೆ ನಿಲ್ಲದ ಪರಿಣಾಮ ಪಂದ್ಯವನ್ನು ರದ್ಧುಗೊಳಿಸಲಾಯಿತು. ಗುವಾಹಟಿಯ ಬರ್ಸಾಪರ ಕ್ರೀಡಾಂಗಣದಲ್ಲಿ ಇಂದು ನಡೆಯಲಿರುವ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ಹಾಗೂ ಮುಂಬೈ ಇಂಡಿಯನ್ ತಂಡಗಳು ಮುಖಾಮುಖಿಯಾಗಲಿವೆ. ಈ ಪಂದ್ಯ ರಾತ್ರಿ ೭.೩೦ಕ್ಕೆ ಆರಂಭವಾಗಲಿದೆ. ಪ್ರಸ್ತುತ ಆಡಿರುವ ಎರಡು ಪಂದ್ಯಗಳಲ್ಲಿಯೂ ಜಯ ಸಾಧಿಸಿ ರಾಜಸ್ಥಾನ ತಂಡ ಅಂಕಪಟ್ಟಿಯಲ್ಲಿ ೩ನೇ ಸ್ಥಾನದಲ್ಲಿದ್ದರೆ, ಆಡಿರುವ ಎರಡೂ ಪಂದ್ಯಗಳಲ್ಲಿ ಒಂದು ಗೆದ್ದು, ಒಂದು ಸೋತಿರುವ ಮುಂಬೈ ತಂಡ ಅಂಕಪಟಿಯಲ್ಲಿ ೬ನೇ ಸ್ಥಾನದಲ್ಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>